# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ ತಿಪಟೂರು

## ಸಿ.ಸಿ ನಂ. 1537/2017

ಚಾಸಾಃ 4
ಫ್ರಾಸಾಃ 3

**ದಿನಾಂಕಃ 15-11-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | ಃ | ಜೆ. ಗಿರಿ |
| ತಂದೆಯ ಹೆಸರು/ ಗಂಡನ ಹೆಸರು | ಃ | ಜೆ.ಎಸ್. ಜನಾರ್ಧನ್ |
| ವಯಸ್ಸು | ಃ | 51 ವರ್ಷ |
| ಉದ್ಯೋಗ | ಃ | ಅಬಕಾರಿ ಉಪ ಆಯುಕ್ತರು |
| ವಾಸ ಸ್ಥಳ | ಃ | ಬೆಂಗಳೂರು |

**ಮುಖ್ಯ ವಿಚಾರಣೆ ಎಪಿಪಿಯವರಿಂದಃ**

**ವಿಸಿಯ ಮೂಲಕ ವಿಚಾರಣೆ ಮಾಡಲಾಯಿತು.**

ಅಕ್ಟೋಬರ್ **2016** ರಿಂದ **2019** ರವರೆಗೆ ಅಬಕಾರಿ ಉಪ ಆಯುಕ್ತರಾಗಿ ತುಮಕೂರಿನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೆ.

ದಿಃ 14.08.2017 ರಂದು ಗ್ರಾಮಾಂತರ ಪೊಲೀಸ್ ಠಾಣೆ ತಿಪಟೂರು ತಾಲ್ಲೂಕಿನವರು ವಶಕ್ಕೆ ಪಡೆದುಕೊಂಡಿರುವ ಎಫ್ ಎಸ್ ಎಲ್ ಗೆ ಕಳುಹಿಸಿಕೊಡಲು ಮತ್ತು ಉಳಿದ ಮದ್ಯದ ಟೆಟ್ರಾ ಪ್ಯಾಕೆಟ್ಸಗಳನ್ನು ಅಬಕಾರಿ ಇಲಾಖೆಯ ವಶಕ್ಕೆ ನೀಡಲು ಅನುಮತಿ ನೀಡಬೇಕೆಂದು ಪತ್ರವನ್ನು ಬರೆದಿರುತ್ತಾರೆ ನಾನು ಸದರಿ ಪತ್ರವನ್ನು ಸ್ವೀಕರಿಸಿದ ನಂತರ ಮಾಲುಪಟ್ಟಿ ಸಂಖ್ಯೆ 79/2017 ರಲ್ಲಿ ಎಫ್ ಎಸ್ ಎಲ್ ಗೆ ಕಳುಹಿಸಿಕೊಡಲು ಮತ್ತು ಉಳಿದ ಟೆಟ್ರಾ ಪ್ಯಾಕೆಟ್ಸಗಳನ್ನು ಅಬಕಾರಿ ಇಲಾಖೆಯ ವಶಕ್ಕೆ ನೀಡಲು ಅನುಮತಿಯನ್ನು ನೀಡಲಾಯಿತು. ನ್ಯಾಯಾಲಯ ನೀಡಿರುವ ಅನುಮತಿ ಮೇರೆಗೆ ಉಳಿದ ಮದ್ಯದ ಟೆಟ್ರಾ ಪ್ಯಾಕೆಟ್ಸಗಳನ್ನು ಅಬಕಾರಿ ಇಲಾಖೆಗೆ ನೀಡಲು ಅನುಮತಿಯನ್ನು ನೀಡಿರುತ್ತೇನೆ. ಸಾಕ್ಷಿ ಸದರಿ ಪತ್ರದಲ್ಲಿರುವ ಅವರ ಸಹಿಯನ್ನು ನೋಡಿ ಗುರುತಿಸಿರುವುದರಿಂದ ಅದನ್ನು ನಿಪಿ-5 ಎಂದು ಮತ್ತು ಅವರ ಸಹಿಯನ್ನು ನಿಪಿ 5(ಎ) ಎಂದು ಗುರುತಿಸಲಾಯಿತು.

ಪಾಟೀ ಸವಾಲು- ಶ್ರೀ ಎಂ ಡಿ ವಕೀಲರಿಂದಃ

ಈ ಪ್ರಕರಣಕ್ಕೆ ಸಂಬಂಧಪಟ್ಟ ಹಾಗೆ ಗ್ರಾಮಾಂತರ ಪೊಲೀಸ್ ಠಾಣೆಯಿಂದ ಮದ್ಯದ ಟೆಟ್ರಾ ಪ್ಯಾಕೆಟ್ಸಗಳನ್ನು ಮತ್ತು ಬಿಯರ್ ನ್ನು ಎಫ್ ಎಸ್ ಎಲ್ ಗೆ ಮತ್ತು ಉಳಿದ ಟೆಟ್ರಾ ಪ್ಯಾಕೆಟ್ಸಗಳನ್ನು ಮತ್ತು ಬಿಯರನ್ನು ಅಬಕಾರಿ ಇಲಾಖೆ ವಶಕ್ಕೆ ನೀಡಲು ಪತ್ರ ಬಂದಿಲ್ಲ ಎಂದರೆ ಸರಿಯಲ್ಲ. ಅದರಂತೆ ನಾನು ಯಾವುದೇ ಅನುಮತಿಯನ್ನು ನೀಡಿಲ್ಲ ನಿಪಿ5 ನ್ನು ಕೇಸಿಗೋಸ್ಕರ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ - ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಿ ಓದಿ ಹೇಳಿ, ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.)

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ತಿಪಟೂರು.